**3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ.**

**ಸಿಸಿ. 9129/2008**

| | |
|---|---|
| **ಸಾಕ್ಷಿದಾರರ ಹೆಸರು** | **ರುದ್ರೇಗೌಡ** |
| **ತಂದೆಯ ಹೆಸರು** | **ವೀರಣ್ಣ** |
| **ವಯಸ್ಸು** | **49 ವರ್ಷ** |
| **ಉದ್ಯೋಗ** | **ವಾಣಿಜ್ಯ ತೆರಿಗೆ ನಿರೀಕ್ಷಕರು** |
| **ವಾಸ** | **ನಾಗರಭಾವಿ, ಬೆಂಗಳೂರು.** |
| **ಪ್ರಮಾಣೀಕರಿಸಿದ ದಿನಾಂಕ** | **04/08/2023.** |

**ಮುಖ್ಯ ವಿಚಾರಣೆ : ಫಿರ್ಯಾದಿ ಪರ ವಕೀಲರಿಂದಃ**

1 ರಿಂದ 7 ನೇ ಆರೋಪಿತರು ಗಿರಿವಜ್ರ ಚಿಟ್ ಫಂಡ್ ಕಂಪನಿಯ ನಿರ್ದೇಶಕರು. ನಾನು 2002 ರಲ್ಲಿ ರೂ.2,00,000/- ಮೊತ್ತದ ಚೀಟಿ ಹಾಕಿದ್ದೆ. ಲಾಭಾಂಶವನ್ನು ಕಳೆದು ತಿಂಗಳಿಗೆ ರೂ.5,000/- ಚಂದಾ ಪಾವತಿಸಬೇಕಾಗಿತ್ತು. ಸುಮಾರು 4-5 ತಿಂಗಳು ಚಂದಾ ಪಾವತಿಸಿದ ನಂತರ ನಾನು ಚೀಟಿಯನ್ನು 40% ಬಿಟ್ಟು ಬಿಡ್ ಮಾಡಿದೆ. ನನಗೆ ಆರೋಪಿತರು ರೂ.1,20,000/- ಹಣ ಕೊಡಬೇಕಾಗಿತ್ತು, ಸದರಿ ಹಣವನ್ನು ನನಗೆ ಕೊಟ್ಟರು. ಹಣ ಪಡೆಯುವ ಸಮಯದಲ್ಲಿ ಆರೋಪಿತರು ನನ್ನಿಂದ 5 ಪ್ರಾಮಿಸರಿ ನೋಟ್ ಗಳನ್ನು, 5 ರಿಂದ 10 ಸಹಿ ಮಾಡಿದ ಖಾಲಿ ಚೆಕ್ ಗಳನ್ನು ಪಡೆದುಕೊಂಡಿದ್ದರು. ಆರೋಪಿತರು ಕಳುಹಿಸಿ ಕೊಟ್ಟ ಏಜೆಂಟ್ ರವರ ಮೂಲಕ ನಾನು ಪ್ರತಿ ತಿಂಗಳು ಚಂದಾ ಹಣವನ್ನು ಪಾವತಿ ಮಾಡುತ್ತಿದ್ದೆ. ನಾನು ಒಟ್ಟು 37 ತಿಂಗಳ ಚಂದಾ ಹಣವನ್ನು ಪಾವತಿಸಿದ್ದು, 36 ರಶೀದಿಗಳನ್ನು ಕೊಟ್ಟಿರುತ್ತಾರೆ.

2. ನಂತರ ನನ್ನಿಂದ ಚಂದಾ ಹಣ ಪಡೆಯಲು ಏಜೆಂಟ್ ಬರಲಿಲ್ಲ, ಆಗ ನಾನೇ ಖುದ್ದಾಗಿ ಆರೋಪಿತರ ಕಛೇರಿಗೆ ಹೋಗಿ ಚಂದಾ ಹಣವನ್ನುಕಟ್ಟಲು ಪ್ರಯತ್ನಿಸಿದೆ. ಆಗ ಆರೋಪಿತರು ನನ್ನಿಂದ ಚಂದಾ ಹಣವನ್ನು ಪಡೆಯಲು ನಿರಾಕರಿಸಿದರು.

**ಮುಂದುವರಿದ ಮುಖ್ಯ ವಿಚಾರಣೆಗೆ ವಕೀಲರು ಸಮಯ ಕೋರಿರುತ್ತಾರೆ, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**

**ಸಾಕ್ಷಿಯನ್ನು ದಿನಾಂಕ 24/08/2023 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆ : ಫಿರ್ಯಾದಿ ಪರ ವಕೀಲರಿಂದಃ**

3. ನಾನು 2002 ರಲ್ಲಿ ಎಸ್.ಎಲ್-2 ಗ್ರೂಪ್ ನಲ್ಲಿ ಚಿಟ್ ಫಂಡ್ ಚಂದಾದಾರನಾಗಿದ್ದೆ. ನಾನು 3 ತಿಂಗಳ ಚಿಟ್ ಫಂಡ್ ಹಣವನ್ನು ಪಾವತಿಸಬೇಕಾಗಿತ್ತು. ದಿನಾಂಕ 13/01/206 ರಂದು ನಾನು ಕೊನೆಯ ಬಾರಿಗೆ ಕಂತಿನ ಹಣವನ್ನು ಕಟ್ಟಿದ್ದು, ಆ ದಿನ ರಶೀದಿಯನ್ನು ಕೊಟ್ಟಿರುತ್ತಾರೆ. ಅಕ್ಟೋಬರ್-2006 ರಲ್ಲಿ ಒಂದು ಕಂತಿನ ಹಣವಾದ ಸುಮಾರು ರೂ.4,700/-ಹಣವನ್ನು ಬಿಲ್ ಕಲೆಕ್ಟರ್ ಬಾಯ್ ಕಡೆ ಕೊಟ್ಟಿರುತ್ತೇನೆ. ಆದರೆ ಆತ ನನಗೆ ರಶೀದಿ ಕೊಡಲಿಲ್ಲ. ನಾನು ಪಾವತಿಸಬೇಕಾದ 3 ತಿಂಗಳ ಚಿಟ್ ಫಂಡ್ ಹಣ ಪಾವತಿಸಲು ನನಗೆ ಯಾವುದೇ ಸಮಸ್ಯೆ ಇರಲಿಲ್ಲ. ನಾನು ಚಂದಾ ಹಣವನ್ನು ಕಟ್ಟುವುದಾಗಿ ಚಿಟ್ ಫಂಡ್ ಕಂಪನಿಯವರು ಹಣ ಪಡೆಯುವುದನ್ನು ನಿರಾಕರಿಸಿ, ಶಶಿಧರ ರವರನ್ನು ಕರೆದುಕೊಂಡು ಬರುವಂತೆ ಸೂಚಿಸಿದರು.

4. ನಾನು ಚಿಟ್ ಫಂಡ್ ಬಿಡ್ ಮಾಡಿ ಹಣ ಪಡೆಯುವಾಗ ಸುಮಾರು 5 ರಿಂದ 10 ಚೆಕ್ ಗಳು, 5 ಆನ್ ಡಿಮಾಂಡ ಪ್ರಾಮಿಸರಿ ನೋಟ್ ಗಳನ್ನು ಚಿಟ್ ಫಂಡ್ ಕಂಪನಿಯವರು ಪಡೆದುಕೊಂಡಿದ್ದರು ಮತ್ತು ಕೆಲವು ದಾಖಲೆಗಳ ಮೇಲೆ ನನ್ನ ಸಹಿಗಳನ್ನು ಪಡೆದುಕೊಂಡಿರುತ್ತಾರೆ.

5. ನಾನು ಕೊಟ್ಟಿದ್ದ ಚೆಕ್ ಗಳ ಪೈಕಿ ಒಂದು ಚೆಕ್ ನ್ನು ಗಿರಿವಜ್ರ ಚಿಟ್ ಫಂಡ್ ಕಂಪನಿಯ ಹೆಸರಿಗೆ ರೂ.3,20,000/- ಮೊತ್ತಕೆ ಭರ್ತಿ ಮಾಡಿಕೊಂಡು, ಬ್ಯಾಂಕ್ ಗೆ ಸಲ್ಲಿಸಿರುತ್ತಾರೆ. ಸದರಿ ಬ್ಯಾಂಕ್ ಖಾತೆಯನ್ನು ನಾನು ಮುಕ್ತಾಯ ಮಾಡಿದ್ದೆ, ಆದ್ದರಿಂದ ಸದರಿ ಚೆಕ್ ಅಮಾನ್ಯವಾಗಿರುತ್ತದೆ. ಚೆಕ್ ಅಮಾನ್ಯವಾದ ನಂತರ ಚಿಟ್ ಫಂಡ್ ಕಂಪನಿಯವರು ನನಗೆ ನೋಟಿಸ್ ಕಳುಹಿಸಿದ್ದರು. ನಾನು ನನ್ನ ವಕೀಲರ ಮೂಲಕ ಸದರಿ ನೋಟಿಸ್ ಗೆ ಸೂಕ್ತ ಉತ್ತರವನ್ನು ಕೊಟ್ಟಿರುತ್ತೇನೆ.

ಚಿಟ್ ಫಂಡ್ ಕಂಪನಿಯವರು ನನ್ನ ವಿರುದ್ದ ಚೆಕ್ ಅಮಾನ್ಯ ಪ್ರಕರಣವನ್ನು ನ್ಯಾಯಾಲಯದಲ್ಲಿ ದಾಖಲಿಸಿದ್ದರು. ಉಭಯಪಕ್ಷಗಾರರ ಪ್ರಕರಣಗಳನ್ನು ಆಲಿಸಿ ಮಾನ್ಯ ನ್ಯಾಯಾಲಯವು ತೀರ್ಪು ನೀಡಿದ್ದು, ಸುಮಾರು ರೂ.40,000/- ಹಣವನ್ನು ಪಾವತಿಸುವಂತೆ ನನಗೆ ಆದೇಶಿಸಿತ್ತು, ನ್ಯಾಯಾಲಯದ ಆದೇಶದಂತೆ ನಾನು ರೂ.40,000/- ಹಣವನ್ನು ನ್ಯಾಯಾಲಯದಲ್ಲಿ ಪಾವತಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಗೆ ವಕೀಲರು ಸಮಯ ಕೋರಿರುತ್ತಾರೆ, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**